**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆ: 77/2016**
**C/W**
**ಎಸ್.ಸಿ. ಸಂಖ್ಯೆ: 84/2017**
**ಎಸ್.ಸಿ. ಸಂಖ್ಯೆ: 90/2018**
**ಎಸ್.ಸಿ. ಸಂಖ್ಯೆ: 21/2019**
**ಎಸ್.ಸಿ. ಸಂಖ್ಯೆ: 51/2019**

ದಿನಾಂಕಃ 09.12.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 14 ಪ್ರಾಸಾ - 7

| | | |
|---|---|---|
| ಹೆಸರು | ಃ | ಡಾ.ಸೂರ್ಯನಾರಾಯಣ |
| ತಂದೆಯ/ಗಂಡನ ಹೆಸರು | ಃ | ಪುವ್ವ ಪೂಜಾರಿ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿ, ಉಡುಪಿ |
| ವಾಸಸ್ಥಳ | ಃ | ಉಡುಪಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ 2016 ರಲ್ಲಿ ಕರ್ತವ್ಯ ನಿರ್ವಹಿಸಿದ್ದೆನು.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ದಿನಾಂಕ 16.05.2016 ರಂದು ಸಂಜೆ 4.15 ರಿಂದ 6.15 ರ ಸಮಯದ ವರೆಗೆ, ಪ್ರಸ್ತುತ ಪ್ರಕರಣದ ತನಿಖಾಧಿಕಾರಿಗಳ ಕೋರಿಕೆ ಮೇರೆಗೆ ಅನಾಮಧೇಯ ವ್ಯಕ್ತಿಯ ಶವವೊಂದನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ್ದೆನು. ಈ ಬಗ್ಗೆ ವಿವರವಾದ ಮರಣೋತ್ತರ ಪರೀಕ್ಷಾ ವರದಿಯನ್ನು ನೀಡಿರುತ್ತೇನೆ.

ಆದರೆ ಸಾವಿನ ಕಾರಣದ ಬಗ್ಗೆ ಅಭಿಪ್ರಾಯವನ್ನು ಮಂಡಿಸಿರುವುದಿಲ್ಲ. ಸದರಿ ನಾನು ನೀಡಿದ ಮರಣೋತ್ತರ ಪರೀಕ್ಷೆಯ ವರದಿಯನ್ನು ಈಗ ನಿಶಾನೆ ಪಿ 7 ಎಂದು ಗುರುತಿಸಲಾಗಿದೆ. ನಿಶಾನೆ ಪಿ 7 ರಲ್ಲಿ ಇರುವ ನನ್ನ ರುಜುವನ್ನು ನಿಶಾನೆ ಪಿ 7(ಎ) ಎಂದು ಗುರುತು ಮಾಡಲಾಯಿತು.

3. ನನ್ನ ಪರೀಕ್ಷೆಯ ಕಾಲಕ್ಕೆ ನಾನು ಸದರಿ ಶವದ ಮೈಮೇಲೆ 11 ಬಾಹ್ಯ ಗಾಯಗಳನ್ನು ಮತ್ತು ಎರಡು ಆಂತರಿಕ ಮೂಳೆ ಮುರಿತಗಳನ್ನು ಗಮನಿಸಿದ್ದೇನೆ. ಈ ಬಗ್ಗೆ ನಿಶಾನೆ ಪಿ 7 ರಲ್ಲಿ ವಿವರವಾಗಿ ನಮೂದಿಸಿದ್ದೇನೆ. ಸದರಿ ಆಂತರಿಕ ಮತ್ತು ಬಾಹ್ಯ ಗಾಯಗಳು ವ್ಯಕ್ತಿಯ ಮರಣಪೂರ್ವ ಗಾಯಗಳಾಗಿರುತ್ತವೆ.

4. ಎಫ್.ಎಸ್.ಎಲ್. ವರದಿಯ ಆಧಾರದ ಮೇಲೆ ನಾನು ಅಭಿಪ್ರಾಯ ಮಂಡಿಸುತ್ತೇನೆ ಎಂದು ಸಾವಿನ ಕಾರಣದ ಅಭಿಪ್ರಾಯವನ್ನು ಕಾಯ್ದಿರಿಸಿದ್ದೆನು.

5. ನಾನು ಗಮನಿಸಿರುವ 11 ವಿವಿಧ ಬಾಹ್ಯ ಗಾಯಗಳು, ಮೃತ ವ್ಯಕ್ತಿಯನ್ನು ಮರಣದ ನಿಕಟಪೂರ್ವದಲ್ಲಿ ಡ್ರ್ಯಾಗನ್ ಆಯುಧದಿಂದ ತಿವಿದು ಹಲ್ಲೆಗೆ ಒಳಪಡಿಸಿದಾಗ ಸಂಭವಿಸುವ ಸಾಧ್ಯತೆ ಇರುತ್ತದೆ.

<u>ಪಾಟೀ ಸವಾಲುಃ</u> **ಶ್ರೀ.ಕೆ.ವಿ.ಕೆ. ವಕೀಲರಿಂದ – ಆರೋಪಿಗಳ ಪರವಾಗಿಃ-**

6. ನಾನು ವೈದ್ಯಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇನೆ. ಆದರೆ ಮರಣೋತ್ತರ ಪರೀಕ್ಷೆಯನ್ನು ಮಾಡಲು ನಾನು

ಅನರ್ಹ ಎಂದರೆ ಸರಿಯಲ್ಲ. ನಾನು ಮರಣೋತ್ತರ ಪರೀಕ್ಷೆಯ ಬಗ್ಗೆ ಸ್ನಾತಕೋತ್ತರ ಪದವಿಯನ್ನು ಪಡೆದಿಲ್ಲ.

7. ನನ್ನ ಅಭಿಪ್ರಾಯದಲ್ಲಿ ಮೃತ ವ್ಯಕ್ತಿಯು ಮರಣೋತ್ತರ ಪರೀಕ್ಷೆಯ ನಿಕಟಪೂರ್ವ 72 ರಿಂದ 96 ಗಂಟೆಗಳಲ್ಲಿ ಸಂಭವಿಸಿರುತ್ತದೆ. ಆದರೆ ಸದರಿ ಶವವು ಸಂಪೂರ್ಣವಾಗಿ ಸೂಚಿಸಿದಂತೆ ಕೊಳೆತಕ್ಕೆ ಒಳಪಟ್ಟಿರಲಿಲ್ಲ.

8. ನನ್ನ ಪರೀಕ್ಷೆಯ ನಿಕಟಪೂರ್ವದಲ್ಲಿ ಶವವು ಸೆಟೆಯುವಿಕೆಗೆ ಒಳಪಟ್ಟಿತ್ತು ಮತ್ತು ನಂತರ ಬಿಡುಗಡೆಯಾಗಿತ್ತು ಎಂದರೆ ಸರಿ. ಶವವು ಸಂಪೂರ್ಣವಾಗಿ ಕೊಳೆತಕ್ಕೆ ಒಳಪಟ್ಟಿದ್ದರಿಂದ ನಾನು ನಿಶಾನೆ ಪಿ 7 ರಲ್ಲಿ ನಮೂದಿಸಿದಂತೆ ಯಾವುದೇ ಬಾಹ್ಯ ಗಾಯಗಳನ್ನು ಗಮನಿಸಿಲ್ಲ ಎಂದರೆ ಸರಿಯಲ್ಲ.

9. ತನಿಖಾಧಿಕಾರಿ ಯಾವುದೇ ಡ್ರ್ಯಾಗನ್ ಆಯುಧವನ್ನು ನೀಡಿ ನಾನು ಗಮನಿಸಿದೆ ಎನ್ನಲಾದ ಬಾಹ್ಯ ಗಾಯಗಳ ಕಾರಣದ ಬಗ್ಗೆ ಅಭಿಪ್ರಾಯವನ್ನು ಕೋರಿಲ್ಲ. ಮೃತ ವ್ಯಕ್ತಿ ಮರಣದ ನಿಕಟ ಪೂರ್ವದಲ್ಲಿ ಜೆಲ್ಲಿ ರಸ್ತೆಯ ಮೇಲೆ ವೇಗವಾಗಿ ಚಲಿಸುವ ದ್ವಿಚಕ್ರ ವಾಹನದಿಂದ ಬಿದ್ದಾಗ ನಾನು ಗಮನಿಸಿದ 11 ವಿವಿಧ ಬಗೆಯ ಬಾಹ್ಯ ಗಾಯಗಳು ಸಂಭವಿಸುತ್ತವೆ ಎಂದರೆ ಸರಿಯಲ್ಲ.

10. ನಾನು ಮರಣೋತ್ತರ ಪರೀಕ್ಷೆ ಕೈಗೊಳ್ಳುವ ಕಾಲಕ್ಕೆ ಯಾವುದೇ ಹೊಚ್ಚಹೊಸ ಗಾಯ ಇರಲಿಲ್ಲ. ನಾನು ಪೊಲೀಸರ ಅನುಕೂಲಕ್ಕೆ ತಕ್ಕಂತೆ ನಿಶಾನೆ ಪಿ 7 ರ ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.